ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಳವಳ್ಳಿ

ಸಿ.ಸಿ. ನಂಃ- 380 /2021

ಚಾಸಾ- 1 ಪ್ರಾಸಾ- 1

ಸಾಕ್ಷಿಯನ್ನು ದಿನಾಂಕಃ 08.11.2022 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಎಂ ಬಿ ಬಸವರಾಜೆ ಅರಸ್ |
| ತಂದೆ/ಗಂಡನ ಹೆಸರು | ಲೇಟ್ ಎಂ ಬಸವರಾಜೆ ಅರಸ್ |
| ವಯಸ್ಸು | 69 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಮಲ್ಲಿನಾಥಪುರ |

**ಮುಖ್ಯ ವಿಚಾರಣೆ- ಮಾನ್ಯ ಸ.ಸ.ಅ. ರವರಿಂದ ಃ-**

**1.** ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. 1 ನೇ ಆರೋಪಿ ಮೃತಪಟ್ಟಿರುತ್ತಾರೆ. ಚಾಸ 2 ನನ್ನ ಹೆಂಡತಿ , ಚಾಸ 3 ನನ್ನ ಮಗಳು, ಚಾಸ 4 ರಿಂದ 6 ನನಗೆ ಗೊತ್ತಿರುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಸದರಿ ದಾಖಲೆ ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದಿಃ 02.05.2020 ರಲ್ಲಿ ಬೆಳಗ್ಗೆ 10.30 ಕ್ಕೆ ನಾನು ಸರ್ವೆ ನಂ 55/2 ಮಲ್ಲಿನಾಥಪುರ , ಮಳವಳ್ಳಿ ತಾಲ್ಲೂಕು ಜಮೀನಿನಲ್ಲಿ ಆರೋಪಿಗಳು ಸುಮಾರು 500 ಅಡಿ ಜಾಗವನ್ನು ಅತಿಕ್ರಮ ಪ್ರವೇಶ ಮಾಡಿ , ನಾನು ತಂತಿ ಬೇಲಿ ಕೆಲಸ ನಿರ್ವಹಿಸುತ್ತಿದ್ದಾಗ ಮತ್ತು ವ್ಯವಸಾಯದ ಕೆಲಸವನ್ನು ನಿರ್ವಹಿಸುತ್ತಿದ್ದಾಗ ಆರೋಪಿಗಳು ನನ್ನ ಕೆಲಸಕ್ಕೆ ಅಡ್ಡಿಪಡಿಸಿ ನನಗೆ ಕೆಟ್ಟ ಬೈಗುಳವನ್ನು ಬೈದಿರುತ್ತಾರೆ. 2 ನೆ ಆರೋಪಿ ನನ್ನನ್ನು ಹೊಡೆಯಲು ಬಂದು ಕೆಳಗೆ ಕೆಡವಿಕೊಂಡು ನನ್ನ ಎದೆಗೆ ತಮ್ಮ ಕೈಯಿಂದ ಗುದ್ದಿರುತ್ತಾನೆ. ಚಾಸ 2 ರವರಿಗೆ 3 ನೇ ಆರೋಪಿ ಕಾಲಿನಿಂದ

ಒದ್ದಿರುತ್ತಾನೆ. ಚಾಸ 3 ರವರಿಗೆ ಉಲ್ಲಾಸ್ ರಾಜೆ ಅರಸ್ ತಲೆ ಜುಟ್ಟು ಹಿಡಿದುಕೊಂಡು ಹೊಡೆದಿರುತ್ತಾರೆ. ಆರೋಪಿಗಳು ನಿಮ್ಮನ್ನು ಸಾಯಿಸದೆ ಬಿಡುವುದಿಲ್ಲ ಎಂದು ಬೆದರಿಕೆ ಒಡ್ಡಿರುತ್ತಾರೆ. ಚಾಸ 4 ರವರು ಜಗಳವನ್ನು ಬಂದು ಬಿಡಿಸಿರುತ್ತಾರೆ. ನಂತರ ಸುಮಾರು 12 ಗಂಟೆ ಆಸುಪಾಸಲ್ಲಿ ಪೂರಿಗಾಲಿ ಆಸ್ಪತ್ರೆಗೆ ನಾನು ಮತ್ತು ಚಾಸ 3 ಹೋಗಿ , ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸುಮಾರು 3 ಗಂಟೆ ಸಮಯದಲ್ಲಿ ಬೆಳಕವಾಡಿ ಪೊಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಪೊಲೀಸರು ಸುಮಾರು 4.15 ಗಂಟೆ ಸಮಯದಲ್ಲಿ ನಾನು ತೋರಿಸಿದ ಸ್ಥಳಕ್ಕೆ ಬಂದು ಚಾಸ 5 ಮತ್ತು 6 ಹಾಗೂ ನನ್ನ ಸಮಕ್ಷಮ ಸ್ಥಳ ಮಹಜರು ಕ್ರಮ ಜರುಗಿಸಿರುತ್ತಾರೆ . ಸಂಜೆ 4. ರಿಂದ 5 ಗಂಟೆವರೆಗೆ ಮಹಜರನ್ನು ಬರೆದಿರುತ್ತಾರೆ. ಸ್ಥಳ ಮಹಜರನ್ನು ಮಲ್ಲಿನಾಥಪುರದಲ್ಲಿ ಇರುವ ನೇರಳೆ ಮರದ ಬಳಿ ಜರುಗಿಸಿರುತ್ತಾರೆ. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಸದರಿ ದಾಖಲೆ ಮಹಜರ್ ಆಗಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ ಮರುಹೇಳಿಕೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ನಾನು ಪೊಲೀಸರಿಗೆ ತಿಳಿಸಿರುತ್ತೇನ. ಆರುೀಪಿತರನ್ನು ನೋಡಿದರೆ ನಾನು ಗುರತಿಸುತ್ತೇನೆ ಈ ದಿನ ಆರೋಪಿ 2 ಹಾಗೂ 3 ರವರು ಹಾಜರಿರುತ್ತಾರೆ.

**ಪಾಟೀಸವಾಲುಃ- ಆರೋಪಿತರ ಪರ ವಕೀಲರಿಂದಃ- ಸಮಯಾವಕಾಶ ಕೋರಿದ್ದು ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್ಸಿ ಮಳವಳ್ಳಿ

ಮಳವಳ್ಳಿ